1015 (407) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನಾಲೆಯಿಂದ ಕೆರೆಗಳಿಗೆ ನೀರನ್ನು ತುಂಬುತ್ತಿದ್ದು ಕೆರೆಕೋಡಿಗಳನ್ನು ದುರಸ್ಥಿ ಪಡಿಸದಿರುವುದರಿಂದ ನೀರು ರೈತರ ಜಮೀನಿನ ಮೇಲೆ ಹರಿದು ಜಮೀನುಗಳು ಹಾಳಾಗಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹೌದಾದಲ್ಲಿ, ಈ ಜಮೀನುಗಳಿಗೆ ನೀರು ಹರಿಯಬಿಡಲು ಕೋಡಿಗಳಿಗೆ ದುರಸ್ಥಿ ಮಾಡಲು ಕೈಗೊಂಡಿರುವ ಕ್ರಮವೇ,

ಇ) ವಿತರಣೆ ನಾಲೆಗಳಿಂದ ನೀರನ್ನು ಹರಿಸಿದ ಮೇಲೆ ರೈತರ ಜಮೀನುಗಳಿಗೆ ಫೀಡರ್‌ಚಾನಲ್ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಜಮೀನುಗಳಿಗೆ ನೀರನ್ನು ಹರಿಸಲು ಹೊಲಗಾಲುವೆಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ

1016 (408) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಖಾಲಿ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ವಿವರ ನೀಡುವುದು),

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಇ) ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) 341

ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಖಾಲಿ ಹುದ್ದೆಗಳನ್ನು ಬಡ್ತಿ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ

ಇ) ನಿವೃತ್ತಿ ಹಾಗೂ ಪದೋನ್ನತಿಯಿಂದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಹುದ್ದೆಗಳು ಆಗಿಂದ್ದಾಗ್ಗೆ ಖಾಲಿಯಾಗುತ್ತಿರುತ್ತವೆ

ಅನುಬಂಧ–1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.408 ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ

ಕ್ರ ಸಂ	ಜಿಲ್ಲಾ ಪಂಚಾಯ್ತಿ ಹೆಸರು	ಖಾಲಿ ಹುದ್ದೆಗಳು	
		ಗ್ರೇಡ್–1 ಕಾರ್ಯದರ್ಶಿ	ಗ್ರೇಡ್–2 ಕಾರ್ಯದರ್ಶಿ
1	ಬೆಂಗಳೂರು (ನ)	1	0
2	ಬೆಂಗಳೂರು (ಗ್ರಾ)	0	16
3	ಬೆಳಗಾಂ	52	8
4	ಬಳ್ಳಾರಿ	7	8
5	ಬೀದರ್	0	0
6	ಬಿಜಾಪುರ	6	4
7	ಚಿಕ್ಕಮಗಳೂರು	4	12
8	ಚಿತ್ರದುರ್ಗ	6	8
9	ದಕ್ಷಿಣ ಕನ್ನಡ	9	6
10	ಧಾರವಾಡ	3	5
11	ಗುಲ್ಬರ್ಗಾ	1	2

ಕ್ರ ಸಂ	ಜಿಲ್ಲಾ ಪಂಚಾಯ್ತಿ ಹೆಸರು	ಖಾಲಿ ಹುದ್ದೆಗಳು	
		ಗ್ರೇಡ್–1 ಕಾರ್ಯದರ್ಶಿ	ಗ್ರೇಡ್–2 ಕಾರ್ಯದರ್ಶಿ
12	ಹಾಸನ	0	5
13	ಕೊಡಗು	0	5
14	ಕೋಲಾರ	0	33
15	ಮಂಡ್ಯ	0	0
16	ಮೈಸೂರು	12	7
17	ರಾಯಚೂರು	13	0
18	ಶಿವಮೊಗ್ಗ	2	5
19	ತುಮಕೂರು	0	15
20	ಉತ್ತರ ಕನ್ನಡ	2	10
21	ಚಾಮರಾಜನಗರ	10	3
22	ದಾವಣಗೆರೆ	0	2
23	ಬಾಗಲಕೋಟೆ	0	11
24	ಗದಗ	9	0
25	ಹಾವೇರಿ	0	6
26	ಉಡುಪಿ	21	6
27	ಕೊಪ್ಪಳ	0	6
		158	**183**

1017 (1046) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ). ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕರ್ನಾಟಕ ಭೂಸೇನಾ ನಿಗಮವು ಬೀದರ್ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಂಡಿದೆ,

ಆ) ಈ ಕಾಮಗಾರಿಗಳನ್ನು ಯಾವಾಗ ನಿಗಮವು ತೆಗೆದುಕೊಂಡಿದೆ (ಕಾಮಗಾರಿಗಳ ಪೂರ್ಣ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),